Reg. No. | | | | | | | | | |

**BCMKAL 203**

ಗುಣಾಂಕ ಆಧಾರಿತ ಮೂರನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2017

ಕನ್ನಡ

**(Common to all Batches)**

**ಕನ್ನಡ ಭಾಷಾ ಪತ್ರಿಕೆ – ೧**

ಸಮಯ : 3 ಗಂಟೆಗಳು

ಗರಿಷ್ಠಾಂಕಗಳು : 80

**ಭಾಗ – 1**

**(ಕಾವ್ಯ)**

I. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ವಿವರವಾಗಿ ಉತ್ತರಿಸಿರಿ. **(1×8=8)**

1) ರನ್ನನ ಕಾವ್ಯಭಾಗದಲ್ಲಿನ ಭೀಮ ದುರ್ಯೋಧನರ ಸಂಭಾಷಣೆಯ ಸ್ವಾರಸ್ಯವನ್ನು ನಿರೂಪಿಸಿರಿ.

2) ಕಣಿವೆಯ ಮುದುಕ ಕವನದ ಸ್ವಾರಸ್ಯವನ್ನು ವಿವರಿಸಿರಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×6=6)**

1) ಅಲ್ಲಮನ ಬಾಲಲೀಲೆಯನ್ನು ಕಾವ್ಯದಲ್ಲಿ ಹೇಗೆ ನಿರೂಪಿಸಲಾಗಿದೆ ?

2) ತಂಬೂರಿಯನ್ನು ಶಿಶುನಾಳ ಶರೀಫರು ಹೇಗೆ ಸಾಂಕೇತಿಕವಾಗಿ ಬಳಸಿಕೊಂಡಿದ್ದಾರೆ ?

ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ. **(1×4=4)**

1) ಪು.ತಿ.ನ.

2) ಪಂಜೆ ಮಂಗೇಶರಾಯರು.

II. ಅ) ಒಂದು ಪದ್ಯಭಾಗದ ಸಂದರ್ಭವನ್ನು ಸೂಚಿಸಿ ಭಾವ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

1) ಜ್ಞಾನವಂತರಿಗೆಲ್ಲಿ ಸ್ವರ್ಗಲೋಕದಿ ತಾಣ
ಹೀನ ಪಾಪ್ಯರ ಕಂಡರಲ್ಲಿಹವ ಪ್ರಾಣಿ
ಮಾನಿಸುವಿಯೇಕೆ ಸುಜ್ಞಾನಿ ತೊರೆದರೆ ಪಾಪ
ವೇನಿಲ್ಲ ತಮ್ಮದಿರ ತೊರೆದವನು ಪಥದಿ.

P.T.O.

2) ಎಲೆಲೆ ರಾಯರೆ! ತೆಲುಗು ಕನ್ನಡ ಕಲಿವ ಕನ್ನಡಿ ಬೇಕೆಲ್ವೆ!
ಬೆಲೆಯ ಕೊಡುವೆನು; ಬೇಗ ತನ್ನಿರಿ, ಚೆಲುವ ಇಂಗ್ಲೀಷ್ ಕನ್ನಡಿ.
ಓದು ಬರಹಗಳೆಮಗೆ ತಿಳಿಯದು, ಓದು ಬರಹವ ತೋರುವಾ
ಬೂದು ಕನ್ನಡಿ ಬೇಕು ರಾಯರೆ, ಬೀದಿಗೆಸೆವುದು ಮಿಕ್ಕವಾ.

ಆ) ಕೆಳಗಿನ ವಾಕ್ಯಗಳಲ್ಲಿ ಎರಡಕ್ಕೆ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ: **(2×4=8)**

1) ನೀರೊಳಗಿರ್ದುಂ ಬೆಮರ್ತನುರಗ ಪತಾಕಂ
2) ಮನದ ಮುಂದಣ ಆಸೆಗೆಂಜಿದರು
3) ಬದುಕುತ್ತೆ ಬದುಕುತ್ತೆ ಈ ಸಸಿ ಬದುಕುತ್ತೆ.

ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: **(4×1=4)**

1) ರನ್ನನ ಗುರುಗಳು ಯಾರು ?
2) 'ಬೆದರಬ್ಬೆದಿತು ವೈತರಣಿಯವನಕ' ಭಾಗವನ್ನು ಯಾವ ಯಕ್ಷಗಾನ ಪ್ರಸಂಗದಿಂದ ಆರಿಸಲಾಗಿದೆ ?
3) 'ಮರಣವೇ ಮಹಾನವಮಿ' ಎಂದು ಭಾವಿಸಿ ಬಾಳಿದವರು ಯಾರು ?
4) 'ವಿಶ್ವಾಸ' ಕವನದ ಕರ್ತೃ ಯಾರು ?

## ಭಾಗ - 2
## (ಕಾದಂಬರಿ)

III. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ. **(1×8=8)**

1) ಕೃಷ್ಣೇಗೌಡರ ಆನೆ ಅಪರಾಧಿಯಾಗುತ್ತಾ ಹೋದ ಬಗೆ ಹೇಗೆ ?
2) ಫಾರೆಸ್ಟರ್ ನಾಗರಾಜನ ವಿಚಿತ್ರ ಶಿಸ್ತು, ಹಟಗಳೇ ಅಂತಿಮವಾಗಿ ಅವನ ಸಾವಿಗೆ ಹೇಗೆ ಕಾರಣವಾದುವು ?

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಬೀದಿನಾಯಿಗಳ ಸಂಬಂಧವಾಗಿ ಪ್ರೆಸಿಡೆಂಟ್ ಖಾನ್ ಸಾಹೇಬರಿಗೆ ಬಂದ ಸವಾಲು ಏನು ?
2) ವೇಲಾಯುಧನ ದುರಂತವನ್ನು ವಿವರಿಸಿರಿ.

ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿರಿ. **(2×1=2)**

1) ಜಂಕ್ಷನ್‌ಬಾಕ್ಸ್ ಹದಿನೇಳನೇ ಕಂಬದಲ್ಲಿ ಸಿಲುಕಿ ದುರಂತವನ್ನಪ್ಪಿದವನು ಯಾರು ?
2) ಕರ್ವಾಲೊ ಕಾದಂಬರಿಯನ್ನು ಬರೆದವರು ಯಾರು ?

## ಭಾಗ - 3
## (ಗದ್ಯ)

IV. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ. (1×8=8)

1) ಜೀವಂತ ದೃಷ್ಟಾಂತಗಳನ್ನು ಕೊಡುವ ಮೂಲಕ ಷಡಕ್ಷರಿಯವರು ವ್ಯಕ್ತಿತ್ವ ವಿಕಸನದ ಮೌಲ್ಯಗಳನ್ನು ಹೇಗೆ ಪ್ರತಿಪಾದಿಸಿದ್ದಾರೆ ?

2) ಕುಂದಗನ್ನಡ ನೆಲದ ಜನಪದ ವೈವಿಧ್ಯವನ್ನು ವಿವರಿಸಿರಿ.

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ. (1×5=5)

1) 'ತಾಯಿಯ ಎದೆಹಾಲು ದ್ರವರೂಪದ ಚಿನ್ನ' – ಎಂಬ ಹೇಳಿಕೆಯನ್ನು ಸಮರ್ಥಿಸಿರಿ.

2) ತಿಳಿಯದೆ ಮಾಡುವ ಪಾಪದ ಬಗ್ಗೆ ನಾಗಸೇನನ ವಿವರಣೆಯೇನು ?

ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (2×1=2)

1) ಲಾಂಗೂಲಾಚಾರ್ಯ ಕಾವ್ಯನಾಮದಿಂದ ಪ್ರಸಿದ್ಧರಾದವರು ಯಾರು ?

2) 'ಮಿಲಿಂದ ಪ್ರಶ್ನೆ' ಎನ್ನುವ ಪುಸ್ತಕ ಯಾವ ಭಾಷೆಯಲ್ಲಿ ರಚಿತವಾಗಿದೆ ?

## ಭಾಗ - 4
## (ಕ್ರಿಯಾತ್ಮಕ ಕನ್ನಡ)

V. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. (1×8=8)

1) ವ್ಯಂಗ್ಯಚಿತ್ರದ ಪ್ರಮುಖ ಅಂಶಗಳು ಯಾವುವು ? ವಿವರಿಸಿರಿ.

2) ಬಾಲೆಗೆ ಹೆದರಿದ ತಾಲಿಬಾನ್ ವ್ಯಂಗ್ಯಚಿತ್ರವನ್ನು ಸಮಗ್ರವಾಗಿ ವಿಶ್ಲೇಷಿಸಿರಿ.

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ. (1×5=5)

1) ಭಾರತದಲ್ಲಿ ವ್ಯಂಗ್ಯಚಿತ್ರವು ಬೆಳೆದುಬಂದ ರೀತಿಯನ್ನು ವಿವರಿಸಿರಿ.

2) 'ಬಡವನ ಊಟ' ವ್ಯಂಗ್ಯಚಿತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (2×1=2)

1) 'ಕೊರವಂಜಿ' ಪತ್ರಿಕೆಯ ಖ್ಯಾತ ವ್ಯಂಗ್ಯಚಿತ್ರಕಾರರು ಯಾರು ?

2) ಭಾರತದಲ್ಲಿ ವ್ಯಂಗ್ಯಚಿತ್ರಗಳ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ ?